ಕರ್ನಾಟಕ ಸರ್ಕಾರ
# ಮೀನುಗಾರಿಕೆ ನಿರ್ದೇಶನಾಲಯ

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001

ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಸಂಖ್ಯೆ: DOF-TECHOALL1/340/2022,E-891987, ದಿನಾಂಕ:22/09/2022**

## ಸುತ್ತೋಲೆ

**ವಿಷಯ:** ಇಲಾಖಾ ಕೆರೆಗಳ ಮೀನುಪಾಶುವಾರು ಹಕ್ಕಿನ ಇ-ಟೆಂಡರ್ ಆರ್ಥಿಕ ಬಿಡ್ ಅಂಗೀಕರಿಸುವ ಸಂಬಂಧ ನಿರ್ದೇಶನ ನೀಡುವ ಬಗ್ಗೆ.

**ಉಲ್ಲೇಖ:** 1) ಮೀನುಗಾರಿಕೆ ಉಪ ನಿರ್ದೇಶಕರು, ತುಮಕೂರುರವರ ಪತ್ರ ಸಂಖ್ಯೆ: ಹಗುಪ/55/2022-23, ದಿನಾಂಕ: 13/09/2022.

2) ಸರ್ಕಾರದ ಆದೇಶ ಸಂಖ್ಯೆ ಪಸಂಮೀ125ಮೀಇಇ2013, ಬೆಂಗಳೂರು ದಿ.21/02/2014.

******************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಪತ್ರದಲ್ಲಿ ಪತ್ರದಲ್ಲಿ ತುಮಕೂರು ಜಿಲ್ಲೆಯಲ್ಲಿ ಎಲ್ಲಾ ಹತ್ತು ತಾಲ್ಲೂಕುಗಳಲ್ಲಿ ಇಲಾಖಾ ಕೆರೆಗಳ ಮೀನುಪಾಶುವಾರು ಹಕ್ಕು ವಿಲೇವಾರಿಗೆ ಸಂಬಂಧಿಸಿದಂತೆ ಇ-ಟೆಂಡರ್ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಬಿಡ್‌ದಾರರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ಈವರೆಗೆ 4 ತಾಲ್ಲೂಕುಗಳಿಂದ 30 ಕೆರೆಗಳ ಮೀನುಪಾಶುವಾರು ಹಕ್ಕಿನ ಇ-ಟೆಂಡರ್ ಆರ್ಥಿಕ ಬಿಡ್ ತೆರೆಯಲಾಗಿದ್ದು, 7 ಕೆರೆಗಳಿಗೆ ಮಾತ್ರ ಸಿಂಗಲ್ ಬಿಡ್ ಸ್ವೀಕೃತವಾಗಿದ್ದು, ಉಳಿದಂತೆ, ಪ್ರತಿ ಕೆರೆಗೆ 2 ರಿಂದ 20 ಬಿಡ್‌ಗಳು ಸ್ವೀಕೃತವಾಗಿದೆ. ಅಲ್ಲದೆ 22 ಕೆರೆಗಳು ರೂ. 50,000/- ಕ್ಕಿಂತ ಹೆಚ್ಚು ಮೊತ್ತಕ್ಕೆ ಬಿಡ್ ನಮೂದಾಗಿವೆ.

ಇದರಿಂದಾಗಿ, ಪ್ರತಿ ಟೆಂಡರ್ ನ ಆರ್ಥಿಕ ಬಿಡ್ ಅನ್ನು ಅಂಗೀಕರಿಸುವ ಸಲುವಾಗಿ ವಿತ್ತಾಧಿಕಾರದನ್ವಯ ಹಂತ ಹಂತವಾಗಿ ಉಪ ನಿರ್ದೇಶಕರು, ಜಂಟಿ ನಿರ್ದೇಶಕರು, ಅಪರ ನಿರ್ದೇಶಕರು ಹಾಗೂ ನಿರ್ದೇಶಕರು ಇವರುಗಳಿಗೆ ಇ-ಸಂಗ್ರಹಣೆ ಪೋರ್ಟಲ್‌ನಲ್ಲಿ ಫಾರ್ವರ್ಡ್ (Forwarding) ಮಾಡಿ, ಆರ್ಥಿಕ ಬಿಡ್ ಅಂಗೀಕೃತವಾದ ನಂತರ, ಯಶಸ್ವಿ ಬಿಡ್‌ದಾರರನ್ನು ಹೊರತುಪಡಿಸಿ ಉಳಿದ ಬಿಡ್‌ದಾರರ ಇ.ಎಂ.ಡಿ ಮೊತ್ತ ಮರುಪಾವತಿಸಲು ಸಾಕಷ್ಟು ಸಮಯ ಬೇಕಾಗುತ್ತದೆ. ಇದರಿಂದ ಬಿಡ್‌ದಾರರು ಅಸಮಾಧಾನ ವ್ಯಕ್ತಪಡಿಸುತ್ತಿದ್ದು, ಶೀಘ್ರವಾಗಿ ಅವರುಗಳಿಗೆ ಇ.ಎಂ.ಡಿ ಮೊತ್ತ ಮರುಪಾವತಿಸಲು ತೊಂದರೆಯಾಗುವ ಸಂಭವವಿರುತ್ತದೆ. ಅಲ್ಲದೆ ಇ.ಎಂ.ಡಿ ಮರುಪಾವತಿಯಾಗಲು ಪೋರ್ಟಲ್‌ನಲ್ಲಿ ಕೆಲವು ದಿನಗಳ ಕಾಲಾವಕಾಶ ಬೇಕಾಗುತ್ತದೆ. ಈ ಎಲ್ಲ ಅಂಶಗಳ ಹಿನ್ನಲೆಯಲ್ಲಿ ನಗದು ಹುಂಡಿ ಪಾವತಿಯಾದ ಇ-ಟೆಂಡರ್ ಆರ್ಥಿಕ ಬಿಡ್‌ಗಳನ್ನು ಜಿಲ್ಲಾ ಮಟ್ಟದ ಉಪ ನಿರ್ದೇಶಕರಗಳ ಹಂತದಲ್ಲಿ ಅಂಗೀಕರಿಸಿದಲ್ಲಿ, ತ್ವರಿತವಾಗಿ ಉಳಿಕೆ ಬಿಡ್‌ದಾರರ ಇ.ಎಂ.ಡಿ ಮೊತ್ತ ಮರುಪಾವತಿಸಬಹುದಾಗಿದೆ. ತದನಂತರ, ಮೀ.ಸ.ನಿ ರವರುಗಳು ವಿತ್ತಾಧಿಕಾರದನ್ವಯ ಸಕ್ಷಮ ಪ್ರಾಧಿಕಾರಕ್ಕೆ ನೇರವಾಗಿ ದೃಢೀಕರಣ ಪ್ರಸ್ತಾವನೆಗಳನ್ನು ಈ ಹಿಂದಿನಂತೆ ಸಲ್ಲಿಸಿ FRIMS ತಂತ್ರಾಂಶದಲ್ಲಿಯೂ ಕೂಡ ಅಳವಡಿಸಿ ಸಲ್ಲಿಸಬಹುದಾಗಿದೆ ಎಂಬ ಅಂಶವನ್ನು ಪರಿಶೀಲಿಸುತ್ತಾ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಿದೆ.

**"ಇ-ಟೆಂಡರ್ ಪ್ರಕಟಣೆ ಹೊರಡಿಸಿರುವ ಜಲಸಂಪನ್ಮೂಲಗಳಿಗೆ ನಿಗದಿಪಡಿಸಿರುವ ECV (Estimated Cost Value) ಅಂದರೆ ಸರ್ಕಾರಿ ಸವಾಲನ್ನು ಆಧರಿಸಿ ಉಲ್ಲೇಖ(2) ರ ಕಂಡಿಕೆ 10 ರಂತೆ ಆರ್ಥಿಕ ಬಿಡ್ ಅಂಗೀಕರಿಸುವಂತೆ ಹಾಗೂ ತದನಂತರ ನಿಯಮಾನುಸಾರ ದೃಢೀಕರಣ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ."**

ಸಹಿ/-
ಮೀನುಗಾರಿಕೆ ನಿರ್ದೇಶಕರು

ಗೆ,
ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು
ಪ್ರತಿ: ಎಲ್ಲಾ ಮೀನುಗಾರಿಕೆ ಉಪನಿರ್ದೇಶಕರು
ಪ್ರತಿ: ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರು
ಪ್ರತಿ: ಹಗುಪ ಸಂಗ್ರಾಹ ಕಡತ (1) ಮತ್ತು (2)ಕ್ಕೆ ಮಾಹಿತಿಗಾಗಿ.

ಮೀನುಗಾರಿಕೆ ನಿರ್ದೇಶಕರ ಪರವಾಗಿ